**ಅಸಲು ದಾವಾ ನಂಃ23/2022**
**ಡಿ.ಡಬ್ಲ್ಯೂ : 1**

<u>ದಿನಾಂಕ :06-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು :- ಶ್ರೀ. ಎಸ್. ಎಸ್. ಜಿ. ವಾದಿ ಪರ ವಕೀಲರಿಂದ :</u>

ನನ್ನ ತಂದೆ ಹೆಸರು ಚಂದಪ್ಪ , ತಾಯಿ ಹೆಸರು ಮೊಗಲಮ್ಮ ಎಂದರೆ ಸರಿ. ಇಬ್ಬರೂ ತೀರಿ ಹೋಗಿದ್ದಾರೆ ಎಂದರೆ ಸರಿ. ನಮ್ಮ ತಂದೆ - ತಾಯಿಗೆ ಮೂರು ಜನ ಹೆಣ್ಣು ಮಕ್ಕಳು, ಒಂದು ಗಂಡು ಮಗು. ಅವರು ದೇವಿಂದ್ರಪ್ಪ ಮೃತ ಹೊಂದಿರುತ್ತಾರೆ. ಅವರು ಮರಣ ಹೊಂದುವ ಕಾಲಕ್ಕೆ ಮದುವೆ ಆಗಿರಲಿಲ್ಲಾ, ಯಾವುದೇ ಮಕ್ಕಳು ಇಲ್ಲಾ. ಅವರು ಸಾಯುವ ಕಾಲಕ್ಕೆ ಅವರಿಗೆ 18-20 ವರ್ಷ ಆಗಿತ್ತು. 2 ನೇ ಪ್ರತಿವಾದಿ ಮತ್ತು ವಾದಿ ನನ್ನ ಹಿರಿಯ ಅಕ್ಕಂದಿರು. ವಾದಿಯನ್ನು ಮಲ್ಲಪ್ಪ ಎಂಬುವನಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. ವಾದಿಗೆ ಮದುವೆ ಆಗಿ 3 ಜನ ಮಕ್ಕಳು ಆದ ನಂತರ ನಾನು ವಾದಿಯ ಗಂಡನೊಂದಿಗೆ 2 ನೇ ಮದುವೆ ಆಗಿದ್ದೇನೆ ಎಂದರೆ ಸರಿ. ನನ್ನ ಮದುವೆ ವಾದಿ ಗಂಡನೊಂದಿಗೆ ಮದುವೆ ಆಗುವ ಕಾಲಕ್ಕೆ ವಾದಿಯು ಸದರಿ ಮದುವೆಗೆ ತಕರಾರು ಮಾಡಿದ್ದು ಆದರೆ ನಾನು ಒತ್ತಾಯಪೂರ್ವಕದಿಂದ ವಾದಿಯ ಗಂಡನೊಂದಿಗೆ ಮದುವೆ ಆಗಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ಹೆಸರಿಗೆ ಆಗುವದಕ್ಕಿಂತ ಮುಂಚೆ ನನ್ನ ತಂದೆ ಮತ್ತು ನನ್ನ ಅಣ್ಣನ ಹೆಸರಿಗೆ ಇದ್ದವು ಎಂದರೆ ಸರಿಯಲ್ಲ. ನಮ್ಮ ಅಣ್ಣ ದೇವಿಂದಪ್ಪ ತೀರಿಕೊಳ್ಳುವ ಕಾಲಕ್ಕೆ ದಾವಾ ಆಸ್ತಿಗಳು ವಾದಿ ಮತ್ತು ನನಗೂ ಸಮನಾಗಿ ಹಂಚಿಕೊಳ್ಳುತ್ತೇವೆ ಎಂದು ತಿಳಿಸಿ ನಾನೊಬ್ಬಳೇ ವಾದಿಗೆ ತಿಳಿಸದೇ ನನ್ನ ಹೆಸರಿಗೆ ಎಲ್ಲಾ ಆಸ್ತಿಗಳನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ . ನಾನು ವಾದಿಕ್ಕಿಂತ ಚಿಕ್ಕವಳಿದ್ದ ಕಾರಣ ಮನೆಯ ಕಾರು ಬಾರು ನಾನೇ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ . ವಾದಿಯು ಸಂಭಾಯಿತ ಮತ್ತು ಒಳ್ಳೆಯ ಕೆಲಸ ಮಾಡಿಕೊಂಡುಹೋಗುತ್ತಿದ್ದು ಅವರಿಗೆ ಅರಿವೇ ಇಲ್ಲದೇ ದಾವಾ ಆಸ್ತಿಗಳನ್ನು ನನ್ನ ಹೆಸರಿಗೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ . ದಾವಾ ವಿಚಾರಣೆ ಕಾಲಕ್ಕೆ ನನಗೂ ಗೊತ್ತಿದ್ದರೂ ಸಹ ನಾನು ಉದ್ದೇಶಪೂರ್ವಕವಾಗಿ ಪ್ರತಿವಾದಿ ನಂ-3 ಮತ್ತು 4 ಇವರಿಗೆ ದಾವಾ ಆಸ್ತಿಯನ್ನು ದಾನ ಪತ್ರ ಮಾಡಿದ್ದೇನೆ ಎಂದರೆ ಸರಿಯಲ್ಲ . ದಾವಾ ಆಸ್ತಿಗಳನ್ನು ನಾನು ಖರಿದಿಸಿಲ್ಲಾ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಗೂ

ಮತ್ತು ನನಗೂ ಮತ್ತು 2 ನೇ ಪ್ರತಿವಾದಿಗೆ ಸರಿಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಂಡ ನಂತರ ಈ ವಿಷಯ ಗೊತ್ತಾಗಿ ವಾದಿಯು ನನ್ನ ಬಳಿ ಬಂದು ಕೇಳಿದಾಗ ಅವರಿಗೆ ಈ ಆಸ್ತಿಯಲ್ಲಿ ಯಾವುದೇ ಸಂಬಂಧ ಇಲ್ಲಾ ಅಂತಾ ಅದು ನನ್ನದೇ ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ .

ಸರ್ವೆ ನಂಬರ. 591, 594 ನ್ನು ನನ್ನ ತಂದೆ ತಾಯಿ ಜೀವಂತ ಇರುವ ಕಾಲಕ್ಕೆ ನನ್ನ ಮೃತ ಅಣ್ಣ ದೇವಿಂದ್ರಪ್ಪ ಇವನ ಹೆಸರಿನಲ್ಲಿ ಅವರೇ ಖರಿದಿಸಿದ್ದಾರೆ ಎಂದರೆ ಸರಿಯಲ್ಲ . ನಮ್ಮ ತಂದೆ ತಾಯಿಯವರು ಮೇಲೆ ಹೇಳಿದ ಜಮೀನುಗಳನ್ನು ನಮ್ಮ ಮನೆತನಕ್ಕೆ ಒಬ್ಬ ಗಂಡು ಅಂತಾ ಹೇಳಿ ಆತ ಹೆಸರಿಗೆ ದಾವಾ ಜಮೀನುಗಳನ್ನು ಖರಿದಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಎರಡೂ ಆಸ್ತಿಗಳನ್ನು ಹೊಡೆಯುವ ದುರುದ್ದೇಶದಿಂದ ನಮ್ಮ ಅಣ್ಣ ದೇವಿಂದ್ರಪ್ಪ ನನ್ನ ಹೆಸರಿಗೆ ಮಾಡಿದ್ದಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ದಾವಾ ಆಸ್ತಿಗಳ ಆದಾಯದಿಂದಲೇ ನಾನು ಟ್ರಾಕ್ಟರ್ ಖರಿದಿಸಿದ್ದೇನೆ ಎಂದರೆ ಸರಿ. ನನ್ನ ಮದುವೆ ವಾದಿಯ ಗಂಡನೊಂದಿಗೆ ಮದುವೆ ಆದ ನಂತರ ನಾನು, ವಾದಿ ಮತ್ತು ಮಲ್ಲಪ್ಪ ಕೂಡಿ ಒಂದೇ ಮನೆಯಲ್ಲಿ ವಾಸ ಇದ್ದೇವೆ ಎಂದರೆ ಸರಿಯಲ್ಲ . ಮದುವೆ ಆದ ನಂತರ ವಾದಿ ಮತ್ತು ನಾನು ಒಂದೇ ಮನೆಯಲ್ಲಿ ಬಾಳ್ವೆ ಮಾಡಿದ್ದು, ಒಂದೇ ಮನೆಯಲ್ಲಿ ಇದ್ದ ಕಾರಣ ಆಸ್ತಿ ಕೊಡಬೇಕಾಗುತ್ತದೆ ಎಂದು ತಿಳಿದು ನಾನು ಬೇರೆ ಕಡೆ ವಾಸ ಇದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಿಡಿ-1 ಕ್ಕೆ ವಾದಿ ಮತ್ತು ಉಳಿದವರು ಯಾರು ಸಹಿ ಮಾಡಿಲ್ಲಾ, ನಾನು ಖೊಟ್ಟಿ ತಯಾರು ಮಾಡಿ ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ . ಈ ದಾವಾ ಆಸ್ತಿ ನನ್ನ ಹೆಸರಿಗೆ ಮಾಡಿಕೊಳ್ಳವು ಬಗ್ಗೆ ವಾದಿ ಯಾವುದೇ ಅರಿವು ಇಲ್ಲಾ, ನನ್ನ ಹೆಸರಿಗೆ ಮಾಡಿಕೊಂಡ ನಂತರ ಅವರಿಗೆ ಗೊತ್ತಾಗಿದೆ ಎಂದರೆ ಸರಿಯಲ್ಲ. ವಾದಿಗೆ ಮಾಹಿತಿ ಇಲ್ಲದ ಕಾರಣ ನಿಡಿ-1 ಕ್ಕೆ ಸಹಿ ಮಾಡುವ ಪ್ರಶ್ನೆ ಬರುವುದಿಲ್ಲಾ ಎಂದರೆ ಸರಿಯಲ್ಲ. ಈ ದಾವೆ ಹಾಕುವದಕ್ಕಿಂತ 3 ತಿಂಗಳ ಮುಂಚೆ ವಾದಿಗೆ ದಾವಾ ಆಸ್ತಿ ನನ್ನ ಹೆರಿಸರಿಗೆ ಆಗಿದೆ ಎಂದು ಗೊತ್ತಾಗಿದೆ ಎಂದರೆ ಸರಿಯಲ್ಲ . ಈ ಎಲ್ಲಾ ವಿಷಯ ವಾದಿಗೆ ಗೊತ್ತಾಗಿ



ಅಸಲು ದಾವಾ ನಂಃ**23/2022**
**ಡಿ.ಡಬ್ಲ್ಯೂ : 1**

ಅವಳ ಪಾಲು ಕೇಳಿದಾಗ ನಾನು ಕೊಡುವುದಿಲ್ಲಾ ಎಂದು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ಊರಲ್ಲಿ ಪಂಚಾಯತಿ ಆಯಿತು ನನಗೆ ಬುದ್ದಿವಾದ ಹೇಳಿದರೂ ಸಹ ನಾನು ಯಾವುದೇ ಪಾಲು ನೀಡಿಲ್ಲಾ ಎಂದರೆ ಸರಿಯಲ್ಲ. ನನ್ನ ದೇವಿಂದ್ರಪ್ಪ ಮರಣ ಹೊಂದುವ ಕಾಲಕ್ಕೆ ನನ್ನ ತಂದೆ ತಾಯಿ ಜೀವಂತ ಇದ್ದರು. ದೇವಿಂದ್ರಪ್ಪ ತೀರಿಕೊಳ್ಳುವ ಕಾಲಕ್ಕೆ ವಾದಿಗೆ 4 ಮಕ್ಕಳು ಆಗಿದ್ದವು. ದಾವಾ ಆಸ್ತಿಗಳು 3 ಜನ ಹೆಣ್ಣು ಮಕ್ಕಳಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ವಾದಿಗೆ ನಾನು ಪಾಲು ಕೊಡಬಾರದೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಿಡಿ-2 ರ ಜೊತೆಗೆ ಇರುವ ವಂಶಾವಳಿಯನ್ನು ನಾನೇ ತಯಾರಿಸಿದ್ದೇನೆ ಅದಕ್ಕೆ ಯಾವುದೇ ಅಧಿಕಾರಿಗಳ ಶೀಲು, ಸಹಿ ಇಲ್ಲಾ ಎಂದರೆ ಸರಿಯಲ್ಲ . ನಾನು ಪ್ರತಿವಾದಿ ನಂ-3 ಮತ್ತು 4 ರವರಿಗೆ ಮಾಡಿದ ದಾನ ಪತ್ರ ವಾದಿಯ ಮೇಲೆ ಬಂಧನಕಾರಕ ಅಲ್ಲಾ ಎಂದರೆ ಸರಿಯಲ್ಲ . ನನ್ನ ಮದುವೆ ಆಗುವ ಕಾಲಕ್ಕೆ ನನ್ನ ಅಣ್ಣನ ಆಸ್ತಿಗಳು ನನ್ನ ಹೆಸರಿಗೆ ಮಾಡಿದ್ದರು ಎಂದರೆ ಸರಿಯಲ್ಲ. ವಾದಿಗೆ ಎಲ್ಲಾ ದಾವಾ ಆಸ್ತಿಗಳಲ್ಲಿ ಪಾಲು ಇದೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ :ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.